ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) :

ಅ) ಹೌದು - ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಏಳು ಕೇಂದ್ರಗಳು ಹಾಗೂ ಧಾರವಾಡ ಕೃಷಿ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಆರು ಕೇಂದ್ರಗಳು.

ಆ) ಹೌದು.

ಶ್ರೀ ಚೌಡರೆಡ್ಡಿ : ರಾಜ್ಯದಲ್ಲಿ 13 ಕೃಷಿ ವಿಜ್ಞಾನ ಕೇಂದ್ರಗಳನ್ನು ಸ್ಥಾಪಿಸಬೇಕೆಂದು ಐ.ಸಿ.ಎಸ್.ಆರ್.ಗೆ ರೆಕಮಂಡ್ ಮಾಡಿದ್ದಾರೆ. ಅದರಲ್ಲಿ ಚಿಂತಾಮಣಿಯು ಸೇರಿರುವುದು ಸಂತೋಷ. ಆ ಬಗ್ಗೆ ಯಾವಾಗ ನೀವು ಪತ್ರ ಬರೆದಿರಿ? ಎಷ್ಟು ದಿನಗಳಿಂದ ಅದು ಪೆಂಡಿಂಗ್ ಇದೆ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ : 12-2-90ರಲ್ಲಿ ನಾವು ಭಾರತೀಯ ಕೃಷಿ ವಿಜ್ಞಾನ ಸಂಸ್ಥೆಗೆ ಶಿಫಾರಸ್ಸು ಮಾಡಿದ್ದೇವೆ. ತದನಂತರವು ಪತ್ರ ವ್ಯವಹಾರ ಮಾಡಿದ್ದೇವೆ. ಈವರೆಗೆ ಮಂಜೂರಾತಿ ದೊರಕಿಲ್ಲ. ಮಂಜೂರಾತಿ ದೊರಕಿದ ತಕ್ಷಣ ಅನುಷ್ಠಾನಕ್ಕೆ ತರುತ್ತೇವೆ.

ಶ್ರೀ ಕೆ.ಹೆಚ್. ಹನುಮೇಗೌಡ : 13 ಕೃಷಿ ವಿಜ್ಞಾನ ಕೇಂದ್ರಗಳನ್ನು ಸರ್ಕಾರ ಸ್ಥಾಪಿಸುತ್ತಿದೆ ಎಂದು ತಿಳಿಸಿದರು. ಹಾಸನ ಜಿಲ್ಲೆಯಲ್ಲಿ ಏನಾದರೂ ಒಂದು ಕೇಂದ್ರವನ್ನು ತೆಗೆಯುವ ಸಂಭವ ಇದೆಯೇ? ಇದ್ದರೆ, ಯಾವ ತಾಲ್ಲೂಕಿನಲ್ಲಿ ಮತ್ತು ಯಾವ ಕಾರಣಕ್ಕಾಗಿ ಅಲ್ಲಿ ತೆಗೆಯಬೇಕೆಂದು ನಿರ್ಧಾರಮಾಡಿದೆ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ : ಹಾಸನ ಜಿಲ್ಲೆಯ ಕಂದಲಿ ಗ್ರಾಮದಲ್ಲಿ ಒಂದು ಕೇಂದ್ರವನ್ನು ತೆರೆಯುವ ಯೋಚನೆ ಮಾಡಿದ್ದೇವೆ; ಮತ್ತು ಅದರಂತೆ ಶಿಫಾರಸ್ಸು ಮಾಡಿದ್ದೇವೆ.

ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಾಯಿಸಿದ ನಿರುದ್ಯೋಗಿಗಳ ಸಂಖ್ಯೆ

1694 - ಶ್ರೀ ಸಾದತ್ ಅಲಿಖಾನ್ (ಚನ್ನಪಟ್ಟಣ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಾಯಿಸಿದ ನಿರುದ್ಯೋಗಿಗಳ ಸಂಖ್ಯೆ (ವರ್ಗವಾರು ಹಾಗೂ ಜಿಲ್ಲಾವಾರು ಮಾಹಿತಿ 1987-88, 1988-89 ಮತ್ತು 1990-91ನೇ ಸಾಲಿಗೆ ಹಾಗೂ ಇದುವರೆಗಿನ ಮಾಹಿತಿ ಒದಗಿಸುವುದು)

ಆ) ಅಭ್ಯರ್ಥಿಗಳ ಪಟ್ಟಿಯನ್ನು ನೇಮಕಾತಿಗಾಗಿ ಕಳುಹಿಸುವ ಸಮಯದಲ್ಲಿ ಸಾಕಷ್ಟು ಅವ್ಯವಹಾರ ನಡೆಯುತ್ತಿರುವುದು ನಿಜವಾದ ಸಂಗತಿಯೇ?

ಇ) ಇದನ್ನು ರದ್ದುಪಡಿಸಲು ಸರ್ಕಾರ ಕೈಗೊಂಡ ಕ್ರಮ.

ಶ್ರೀ ಎ.ಎಸ್. ನಾಡಗೌಡ (ಕಾರ್ಮಿಕ ರಾಜ್ಯ ಸಚಿವರು):

ಅ) 12,97,528 ವರ್ಗವಾರು ಹಾಗೂ ಜಿಲ್ಲಾವಾರು ಮಾಹಿತಿ ಲಗತ್ತಿಸಿದೆ.

ಆ) ಇಲ್ಲ

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ANNEXURE-1

Statement showing the educationall break up of applicants on the rolls of the employment Exchanges in the State at the end 1988-89, 1989-90, 1990-91

Sl. No.	*Category*	*1988-89 (end of Mar.89)*	*1989-90 (end of Mar.90)*	*1990-91 (upto the end of Dec. 90)*
1	2	3	4	5
1.	Post Graduates in Arts, Science & Commerce	7383	8813	9239
2.	Other Post Graduates	800	903	1032
3.	Graduates in Arts, Science & Commerce	66899	74420	74119
4.	Gradueates in Engineering	8864	10692	11892
5.	Graduates in Medium	723	777	804
6.	Other Graduates	17276	19710	23168
7.	Diploma holders	20480	25882	27675
8.	ITI/ATS/Other Certificates holders	31625	36661	37945
9.	Matriculates	604892	699744	752179
10	Below Matriculates	175519	192834	183131
11.	Literates, illiterates and others	148230	178214	176344
	Grand Total	**1082691**	**1248650**	**1297528**

ANNEXURE-2

Statement showing Districtwise break-up applicants on the rolls of the Employment Exchanges in the State during 1988-89, 1989-90 & 1990-91.

Sl. No.	*District.*	*No. of applicants on the rolls of the employment exchanges in the State.*		
		1988-89 (end of March 89)	*1989-90 (end of March 90)*	*1990-91 (end of Decem.90)*
1	2	3	4	5
1.	Bangalore	370554	412407	423879
2.	Belgaum	66063	75691	80539
3.	Bellary	27556	34403	40911
4.	Bidar	21701	27056	29562
5.	Bijapur	39406	48732	50178
6.	Chickmagalur	29227	33046	28052
7.	Chitradurga	38524	42998	46750
8.	Dharawar	71861	83998	92859
9.	Gulbarga	33863	43798	36974
10.	Hassan	29882	31334	32568
11.	Kolar	41138	46715	46723
12.	Kodagu	11801	13768	13531
13.	Mandya	27477	32829	32645
14.	Mysore	58815	71589	76276
15.	North Canara	34751	39870	41496
16.	Raichur	27310	33301	35370
17.	Shimoga	43811	49903	53390
18.	South Canara	53941	64087	70165
19.	Tumkur	55010	63125	65660
Grand Total.		**1082691**	**1248650**	**1297528**

ಶ್ರೀ ಸಾದತ್ ಅಲಿಖಾನ್ : 1986-89ರಲ್ಲಿ 10 ಲಕ್ಷದ 82 ಸಾವಿರ ಜನ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ರಿಜಿಸ್ಟರ್ ಮಾಡಿಸಿದ್ದಾರೆ. 1989-90ರಲ್ಲಿ 12 ಲಕ್ಷದ 48 ಸಾವಿರ ಮಂದಿ 1990-91ರಲ್ಲಿ 12 ಲಕ್ಷದ 97 ಸಾವಿರ ಮಂದಿ, ಹೀಗೆ ಒಟ್ಟು 36 ಲಕ್ಷದ 88 ಸಾವಿರ ಜನ ಡಿಸೆಂಬರ್ 1991ರವರೆಗೆ ರಿಜಿಸ್ಟರ್ ಮಾಡಿಸಿದ್ದಾರೆ. ಇದು 3 ವರ್ಷಗಳ ಅವಧಿಯಲ್ಲಿ ರಿಜಿಸ್ಟರ್ ಮಾಡಿಸಿರುವುದು. ಈ 2-3 ವರ್ಷಗಳ ಅವಧಿಯಲ್ಲಿ ಯಾರು ರಿಜಿಸ್ಟರ್ ಮಾಡಿಸಿದ್ದಾರೆ ಅವರಿಗೆ ಮಾತ್ರ ಇಂಟರ್‌ವ್ಯೂ ಬಂದಿದೆ. 10-15 ವರ್ಷಗಳ ಹಿಂದೆ ಪದವೀಧರರು ಮತ್ತು ಇಂಜಿನಿಯರಿಂಗ್ ಪದವೀಧರರು ರಿಜಿಸ್ಟರ್ ಮಾಡಿಸಿದ್ದರೂ ಅವರಿಗೆ ಇಂಟರ್‌ವ್ಯೂ ಬಂದಿಲ್ಲ. ಲಂಚ ಕೊಟ್ಟರೆ ಬರುತ್ತದೆಂದು ತಿಳಿದುಬಂದಿದೆ. ಸುಮಾರು 2ರಿಂದ 5ಸಾವಿರ ರೂಪಾಯಿಗಳವರೆಗೆ ಕೊಟ್ಟರೆ ಬರುತ್ತದೆಂದು ಗೊತ್ತಾಗಿದೆ. ಶಿಕ್ಷಕರ ನೇಮಕಾತಿ ವಿಚಾರ ತಮಗೆ ಗೊತ್ತಿರಬಹುದು. ಬೆಳಗಾಂ, ಬಿಜಾಪುರದಲ್ಲಿ ಏನು ಮಾಡಿದ್ದಾರೆಂದರೆ ಇನ್‌ಕಂ ಸರ್ಟಿಫಿಕೇಟ್‌ನ್ನು ತಪ್ಪು ಕೊಟ್ಟಿದ್ದಾರೆ. ಆಗ ಅವರು ಲಿಸ್ಟ್‌ನಲ್ಲಿ ಬರುತ್ತಾರೆ. ಆದ್ದರಿಂದ ಎಲ್ಲಾ ಕಡೆ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಪ್ರೊಸೀಜರನ್ನು ಮಾಡರ್ನೈಸ್ ಮಾಡಬೇಕು. ಇದನ್ನು ಕಂಪ್ಯೂಟರೈಸ್ ಮಾಡಿ ಫುಲ್‌ಪ್ರೂಪ್ ಮೆತಡ್ಸ್‌ನ್ನು ಅಳವಡಿಸಬೇಕೆಂದು ಸಲಹೆ ಮಾಡುತ್ತೇನೆ.

ಶ್ರೀ ಎ.ಎಸ್. ನಾಡಗೌಡ : ಮಾನ್ಯ ಸಾದತ್ ಅಲಿಖಾನ್‌ರವರು ಹೇಳಿದ ಪ್ರಕಾರ ಯಾವ ಘಟನೆಯೂ ನಡೆದಿಲ್ಲ. ಸ್ಪೆಸಿಫಿಕ್ ಆಗಿ ಎಲ್ಲೆಲ್ಲಿ ನಡೆದಿದೆ ಎಂದು ಹೇಳಿದರೆ ಖಂಡಿತವಾಗಿ ಕ್ರಮ ಕೈಗೊಳ್ಳುತ್ತೇವೆ. ಬೆಳಗಾಂ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅವರು ಹೇಳಿದಮೇಲೆ ಅಲ್ಲಿ ಎನ್‌ಕ್ವೈರಿ ಮಾಡುವುದಕ್ಕೆ ಹಿರಿಯ ಅಧಿಕಾರಿಗಳನ್ನು ಕಳುಹಿಸಿ ವರದಿ ತರಿಸಿಕೊಂಡಿದ್ದೇನೆ. ಆ ರೀತಿ ಪ್ರಕರಣ ಯಾವುದೂ ಕಂಡುಬಂದಿಲ್ಲ. ಅವರು ಹೇಳಿದ್ದಕ್ಕೆ ಸಂಬಂಧಪಟ್ಟ ಹಾಗೆ ಯಾವುದೂ ಇಲ್ಲವೆಂದು ಮತ್ತೊಮ್ಮೆ ಸ್ಪಷ್ಟಪಡಿಸುತ್ತೇನೆ. ಬೆಂಗಳೂರಿನಲ್ಲಿ ಕಂಪ್ಯೂಟರ್ ಸಿಸ್ಟಂನ್ನು ಇಂಪ್ರೂವ್ ಮಾಡುತ್ತಿದ್ದೇವೆ. ಆ ಪ್ರಕಾರವೇ ಎನ್‌ರೋಲ್ ಮಾಡುತ್ತಿದ್ದೇವೆ. ಅದೇ ರೀತಿ ಎಲ್ಲಾ ಕಡೆ ಕಂಪ್ಯೂಟರ್ ಸಿಸ್ಟಂ ತರಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. ಈ ರೀತಿ ಒಂದೆರಡು ಕೇಸ್ ಆಗುತ್ತಿದ್ದರೂ ಫುಲ್ ಪ್ರೂಪ್ ಮೆತಡ್ಸ್ ಅಳವಡಿಸಬೇಕೆಂದು ಹೇಳುತ್ತಿದ್ದಾರೆ. ಇದಕ್ಕೋಸ್ಕರ ಕಂಪ್ಯೂಟರ್ ಸಿಸ್ಟಂನ್ನು ಎಲ್ಲಾ ಕಡೆ ಮಾಡಬೇಕೆಂಬ ತೀರ್ಮಾನ ತೆಗೆದುಕೊಂಡಿದ್ದೇವೆ.

ಶ್ರೀ ಸಾದತ್ ಅಲಿ ಖಾನ್ : ಸ್ಪೆಸಿಫಿಕ್ ಇನ್‌ಸ್ಟೆನ್ಸ್ ಎಂದರೆ 36,28,869 ಜನ ಮೂರು ವರ್ಷದಲ್ಲಿ ರಿಜಿಸ್ಟರ್ ಮಾಡಿಸಿದ್ದಾರೆ. ಎಲ್ಲಾ ಸದಸ್ಯರಿಗೂ ಗೊತ್ತಿದೆ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಲ್ಲಿ ಏನೇನು ನಡೆಯುತ್ತಿದೆ ಎಂಬುದು. ಸ್ಪೆಸಿಫಿಕ್ ಇನ್‌ಸ್ಟೆನ್ಸ್ ನಾನು ತರುತ್ತೇನೆ. ಇಡೀ ರಾಜ್ಯದಲ್ಲಿ ತಮ್ಮ ಹತ್ತಿರ ಕಂಪ್ಲೇಂಟ್ಸ್ ಬರುತ್ತಿದೆ. It is a known fact. In order to stop this mischief some tool-proof method should be brought.

ಶ್ರೀ ಎ.ಎಸ್. ನಾಡಗೌಡ : ಇದೇ ಕಾರಣಕ್ಕೆ ಹೇಳುತ್ತಾ ಇರುವುದು. ಅದನ್ನು ತಪ್ಪಿಸುವುದಕ್ಕೆ ಕಂಪ್ಯೂಟರೈಸೇಷನ್ ತರುವ ವಿಚಾರ ಮಾಡುತ್ತಾ ಇರುವುದು. ಅದಾದಮೇಲೆ ಈ ರೀತಿ ಘಟನೆ ನಡೆಯುದಂತೆ ಮಾಡುತ್ತೇವೆ. ಆದರೆ ಮಿಸ್‌ಚೀಫ್ ನಡೆದಿಲ್ಲ ಎಂದು ರೆಕಾರ್ಡ್ಸ್ ಆಧಾರದಮೇಲೆ ಮಾಹಿತಿ ಸಿಕ್ಕಿದೆ. ನಡೆದಿದೆ ಎಂದು ಸ್ಪೆಸಿಫಿಕ್ಕಾಗಿ ತಾವು ಹೇಳಿದರೆ ಖಂಡಿತವಾಗಿ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಕೃಷಿ ನೀತಿಗಳ ಬಗ್ಗೆ ಸ್ಥಾಯಿ ಸಮಿತಿ ರಚನೆ

1701 - ಪ್ರೊ. ಎಂ.ಡಿ. ನಂಜುಂಡಸ್ವಾಮಿ (ಧಾರವಾಡ ಗ್ರಾಮಾಂತರ) : ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?